ಶೇಕಡಾ ಹತ್ತು. ಅವರು ಈಗಾಗಲೇ ಕಂಪನಿಯಿಂದ ಬಹಳ ಹಣ ತೆಗೆದಿದ್ದಾರೆ. ಅವರ ಬಂಡವಾಳ ಖಾತೆಯು ಖೋತಾ ಆಗಿದೆ. ಅವರು ಒಂದು ಕೋಟಿಗೂ ಮಿಕ್ಕಿ ಹೆಚ್ಚು ಹಣ ಕಂಪನಿಗೆ ಕೊಡುವುದು ಬಾಕಿಯಿದೆ. ಕಂಪನಿಯ ವ್ಯವಹಾರದಲ್ಲಿ ಲಾಭ ಬಂದರೆ ಅವರ ಪಾಲು ಶೇಕಡಾ ಹತ್ತು ಅಷ್ಟೇ. ಹಾಗಾಗಿ ಅದಕ್ಕಿಂತ ಜಾಸ್ತಿ ಹಣ ಸಿಗುವುದಾದರೆ, ಬಿಡ್‌ನ ವಿವರಗಳನ್ನು ಪ್ರತಿಸ್ಪರ್ಧಿಗಳಿಗೆ ಕೊಡುವುದೇ ಲಾಭದಾಯಕವಲ್ಲವೇ?" ಕರಮಚಂದ ಹೇಳಿದಾಗ ಪ್ರವೀಣ ಬಿಳಿಚಿಕೊಂಡ.

"ಹೌದು, ಮುತ್ತಪ್ಪ. ಈ ಹಾಳು ಕೆಲಸ ಮಾಡಿದ್ದು ನಾನೇ. ಮಲೆನಾಡು ಬಿಲ್ಡರ್ಸ್ ಸಂಸ್ಥೆಯವರು ಸ್ವಲ್ಪ ಹಣ ಕೊಡ್ತಾ ಇದ್ದರು. ತಪ್ಪಾಯ್ತು, ಇನ್ನು ಮಾಡಲ್ಲ."

"ಪ್ರವೀಣ! ನಿನ್ನನ್ನು ನಂಬಿ ನಾನು ಮುಳುಗಿದೆ. ಇನ್ನು ಈ ಪಾಲುದಾರಿಕೆ ಮುಂದುವರೆಸುವುದರಲ್ಲಿ ಅರ್ಥವಿಲ್ಲ." ಕಠಿಣವಾಗಿ ನುಡಿದ ಮುತ್ತಪ್ಪ.

"ಹಾಂ, ನೀವು ಅದನ್ನು ನಿಧಾನವಾಗಿ ಇತ್ಯರ್ಥ ಮಾಡಿಕೊಳ್ಳಿ. ನಾವಿನ್ನು ಹೊರಡಬಹುದೆ? ಹಾಂ, ಇನ್ನೊಂದು ಸ್ಪಷ್ಟೀಕರಣ. ನೀಲಮ್ಮ ಕಿಟಕಿಯ ಚಿಲಕ ಏಕೆ ತೆಗೆದಿರಿಸದೆ, ಬರೀ ಹುಕ್ ಸಡಿಸಿ ಇಟ್ಟಳು ಎಂಬುದರ ಬಗ್ಗೆ. ನಿಮ್ಮ ಮೂಲ ಯೋಜನೆಯಂತೆ, ಬಿಡ್ ಮಾಡಿದ ಅನಂತರ, ಅಂದರೆ, ಹನ್ನೆರಡರ ಸುಮಾರಿಗೆ ತನಿಖೆ ಮಾಡುವುದು ಎಂದಿತ್ತು ಅಲ್ಲವೇ? ಹಾಗಾಗಿ, ಹತ್ತು ಗಂಟೆಗೆ ನಾಗರಾಜು ಮನೆಗೆ ಹೋಗಬಹುದು ಅಂತ ಪ್ರವೀಣ ಭಾವಿಸಿರಲೇಬೇಕಲ್ಲ!" ಕರಮಚಂದ ಎದ್ದು ನಿಂತ.

ನಾಗರಾಜು ನಮಗೆ ಕೃತಜ್ಞತೆ ಸೂಚಿಸಿದ. ನಾವು ಮೆಟ್ಟಿಲು ಇಳಿಯುವಾಗ, ಮುತ್ತಪ್ಪ ಎದುರಿಸಿರು ಬಿಡುತ್ತಾ ಓಡಿ ಬಂದ.

"ಸರ್, ಒಂದು ಕೊನೆಯ ಪ್ರಶ್ನೆ. ಆ ಫೈಲು ನೋಡಿದಾಗ ನಾಗರಾಜು ಹೇಳಿದ ಮಾತಿನ ಅರ್ಥವೇನು ಗೊತ್ತಾಯಿತೇ?"

"ಮುತ್ತಪ್ಪ, ನನಗೆ ಗೊತ್ತು. ಆದರೆ, ಅದು ಪ್ರಕರಣಕ್ಕೆ ಸಂಬಂಧಿಸಿಲ್ಲವಾದ್ದರಿಂದ, ನಾನು ಹೇಳುವಂತಿಲ್ಲ. ಮುಂದೆ ನಿಮಗೆ ಗೊತ್ತಾಗಲೂಬಹುದು."

ಕಾರನ್ನೇರುವಾಗ ನಾನು ಅದೇ ಪ್ರಶ್ನೆಯನ್ನು ಕರಮಚಂದನಲ್ಲಿ ಹಾಕಿದೆ,

"ಬಿದ್ದಪ್ಪ, ಬಹುಶಃ ನಾಗರಾಜು ಮಲೆನಾಡು ಬಿಲ್ಡರ್ಸ್ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರುತ್ತಾನೆ. ಆತ ಆ ಕಾಗದ ಪತ್ರಗಳನ್ನು ಫೈಲಿನಲ್ಲಿ ಇರಿಸಿದ್ದಿರಬೇಕು. ಹಾಗಾಗಿ, ಫೈಲಿನಲ್ಲಿ ಅದು ಕಾಣದಿದ್ದಾಗ, ಅದೆಲ್ಲಿ ಹೋಯ್ತು ಎಂದು ಉದ್ಗರಿಸಿದ್ದಾನೆ. ಆತನಿಗೆ ಒಮ್ಮೆಗೆ ಸಮಾಧಾನವೂ ಆಗಿದ್ದಿರಬೇಕು! ತಮ್ಮ ಆ ಕಾಗದಗಳನ್ನು ತೆಗೆದು, ಬಿಡ್ ದಾಖಲೆ ಇರಿಸಿ, ಅವುಗಳನ್ನು ಹರಿದು ಹಾಕಿದ್ದಾನೆ. ಅದರಲ್ಲಿ ಒಂದು ಚೂರು ನಮಗೆ ಸಿಕ್ಕಿತಷ್ಟೇ!"

ಎರಡೇ ತಾಸಿನೊಳಗೆ ಮುಚ್ಚಿದ ಕಿಟಕಿಯ ರಹಸ್ಯ ಬಯಲಾಗಿತ್ತು.

### ರವಿರಾಜ ಬೈಕಂಪಾಡಿ

ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಅವರ ಮೊದಲ ಪತ್ತೆದಾರಿ ಕತೆ 'ಭವಿಷ್ಯ' ಪ್ರಕಟವಾಗಿದ್ದು 'ಸುಧಾ' ವಾರಪತ್ರಿಕೆಯಲ್ಲಿ. ಪತ್ತೆದಾರಿ ಕಿರುಕಾದಂಬರಿ 'ಅದಲು–ಬದಲು' ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಕತೆ–ನೀಳ್ಗತೆಗಳೂ ಪ್ರಕಟಗೊಂಡಿವೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ವಾಸವಾಗಿದ್ದಾರೆ.